# ಗೀತಾ ನಾಗಭೂಷಣ



ಕನ್ನಡ ಸಾಹಿತ್ಯದಲ್ಲಿ ದಲಿತರ ಬದುಕಿನ ದಟ್ಟ ಚಿತ್ರಣ ನೀಡಿದ ಲೇಖಕಿ ಗೀತಾ ನಾಗಭೂಷಣ. ಅವರು ಸುಮಾರು 25ಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿದ್ದಾರೆ. ವ್ಯವಸ್ಥೆ, ಶೋಷಣೆಯ ವಿರುದ್ಧ ತಮ್ಮದೇ ಆದ ವಿಶಿಷ್ಟ ಬಂಡಾಯದ ದನಿಯನ್ನು ಕನ್ನಡ ಓದುಗರಿಗೆ ಕೇಳಿಸಿದ ಲೇಖಕಿ ಅವರು. ಅವರ 'ಬದುಕು' ಕಾದಂಬರಿ ಅವರಿಗೆ ಸಾಕಷ್ಟು ಮನ್ನಣೆ, ಓದುಗರ ಪ್ರೀತಿಯನ್ನು ತಂದು ಕೊಟ್ಟಿತು. ಅದು ಅವರ ಸಾಹಿತ್ಯದತ್ತ ಓದುಗರನ್ನು ಸೆಳೆದುಕೊಳ್ಳುವ, ನಿರ್ದೇಶಿಸುವ ಪ್ರಾತಿನಿಧಿಕ ಕೃತಿ ಕೂಡ.
ಕಲಬುರ್ಗಿ ಜಿಲ್ಲೆಯ ಸಾವಳಗಿ ಎಂಬ ಪುಟ್ಟ ಹಳ್ಳಿಯ ಬಡಕುಟುಂಬದಲ್ಲಿ ಹುಟ್ಟಿದ ಗೀತಾ ನಾಗಭೂಷಣ ಕಾಲೇಜೊಂದರ ಪ್ರಾಂಶುಪಾಲೆಯಾಗಿ ನಿವೃತ್ತರಾಗಿದ್ದಾರೆ. ತಂದೆ ಶಾಂತಪ್ಪ, ತಾಯಿ ಶರಣಮ್ಮ. 'ಬದಲಾಗುವ ಬಣ್ಣಗಳು', 'ಆಘಾತ', 'ಅಭಿಮಾನ', 'ಮೋಹಾ್ವ', 'ನಿನ್ನ ತೋಳುಗಳಲ್ಲಿ', 'ನನ್ನ ಒಲವು ನಿನ್ನ ಚೆಲವು', 'ನೀಲಗಂಗಾ', 'ಹಸಿ ಮಾಂಸ ಮತ್ತು ಹದ್ದುಗಳು' ಮುಂತಾದವು ಅವರ ಕಾದಂಬರಿಗಳಾಗಿವೆ. ಅವರ 'ಮಾಪುರ ತಾಯಿಯ ಮಕ್ಕಳು' ಕಾದಂಬರಿ 'ಮಯೂರ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. 'ಹಸಿ ಮಾಂಸ...' ಕಾದಂಬರಿ 'ಹೆಣ್ಣಿನ ಕೂಗು' ಎಂಬ ಹೆಸರಿನಲ್ಲಿ ಸಿನಿಮಾ ಆಯಿತು. ಇವರ ಸಂಶೋಧನ ಕೃತಿ 'ದುರುಗ ಮುರುಗಿಯರ ಸಂಸ್ಕೃತಿ'ಯಾದರೆ, ಕಥಾಸಂಕಲನಗಳು: 'ಜ್ವಲಂತ', 'ಅವ್ವ ಮತ್ತು ಇತರ ಕಥೆಗಳು', 'ಕ್ಯಾದಗಿ ಬನದಾಗ ಕತೆಯಾಗಿ ನಿಂತವರು'. 'ಖೇಮಣ್ಣ' ಸಂಪಾದಿತ ಕೃತಿ. ಗೀತಾ ಅವರ ಕಾದಂಬರಿಗಳು ಜನಪ್ರಿಯವಾಗಿರುವುದರ ಜೊತೆಗೆ ಓದುಗರ ಎದುರು ಶೋಷಣೆ ಮತ್ತು ಕ್ರೌರ್ಯದ ಹಲವು ಮುಖಗಳನ್ನು ತೆರೆದಿಟ್ಟಿವೆ; ಹೊಸ ಎಚ್ಚರವನ್ನೂ ಮೂಡಿಸಿವೆ.

ಕೆಳಗಿಳಿದು ಸಂತೋಷ್‌ಗೆ ವಂದಿಸಿ ಮುನ್ನಡೆದಳು. 'ನಾಳೆ ಬೆಳಿಗ್ಗೆಯೂ ನಾನು ಫೋರ್ಟ್ ಕಡೆಗೆ ಬರಬೇಕು. ಹತ್ತಕ್ಕೆ ರೆಡಿಯಾಗಿರಿ. ನಾನು ಬಂದು ಕರೆದೊಯ್ಯುತ್ತೇನೆ' ಎಂದು ಕಾರ್ ಸ್ಟಾರ್ಟ್ ಮಾಡಿ ಕೈಯಾಡಿಸಿದ. ತನಗೆ ಗೊತ್ತಿಲ್ಲದಂತೆ ಅವಳೂ ತಲೆಯಲ್ಲಾಡಿಸಿ ಕೈ ಮೇಲೆ ಎತ್ತಿದಳು.

ಕಬ್ಬಿಣದ ಗೇಟನು ತಳ್ಳಿ ಸರಸರನೆ ಮೆಟ್ಟಲು ಹತ್ತಿ ಕೀ ತಿರುಗಿಸಿ ಬಾಗಿಲು ತೆಗೆದಳು. ಮೈತುಂಬ ಎಂಥದೋ ಹೊಸ ಹೊಸ ಚೈತನ್ಯದ ಅಲೆಗಳು. ಕೈಕಾಲುಗಳಲ್ಲಿ ಅತೀವ ಚಟುವಟಿಕೆ. ಬಾಗಿಲು ತೆಗೆದವಳು ಅಲ್ಲಿಯೇ ನಿಂತಳೊಂದು ಚಣ. ಉಸಿರಿನ ಗತಿಯಲ್ಲಿ ತೀವ್ರತೆ. ಎದೆತುಂಬ ಮಧುರಭಾವಗಳ ಏರಿಳಿತ.